# ಸ್ವಾಮಿ ಈಶಾನಾನಂದ (೧೮೯೮ - ೧೯೭೮)

**ಮೂಲ ಬಂಗಾಳಿ: ಸ್ವಾಮಿ ಚೇತನಾನಂದ** **ಅನುವಾದ: ಕುಮಾರಿ ಪಿ. ಉಷಾ**

ಅತ್ಯಂತ ಸಣ್ಣ ವಯಸ್ಸಿನಲ್ಲೇ ಶ್ರೀಮಾತೆಯವರ ಬಳಿಗೆ ಹೋಗಿ, ಅವರ ಶಿಷ್ಯರೂ ಸೇವಕರೂ ಆಗಿ ಸೇವೆ ಸಲ್ಲಿಸಿದ ಮಹಾನ್ ಸಂನ್ಯಾಸಿಗಳೊಬ್ಬರ ಸ್ಮೃತಿಚಿತ್ರ ಇಲ್ಲಿದೆ. 'ವರದ ಮಹಾರಾಜ್' (ಅವರ ಪೂರ್ವಾಶ್ರಮದ ಹೆಸರು) ಎಂದೇ ಪ್ರಸಿದ್ಧರಾಗಿದ್ದ ಸ್ವಾಮಿ ಈಶಾನಾನಂದರು ತಮ ಗುರು, ತಾಯಿ, ಜಗನ್ಮಾತೆ ಎಲ್ಲವೂ ಆಗಿದ್ದ ಶ್ರೀಮಾತೆಯವರ ಸ್ಮೃತಿಚಿತ್ರವನ್ನು 'ಮಾತೃಸಾನ್ನಿಧ್ಯೇ' ಎಂಬ ಗ್ರಂಥದಲ್ಲಿ ಬರೆದಿದ್ದಾರೆ. ಹಳ್ಳಿಯ ಮುಗ್ಧ ಪರಿಸರದಲ್ಲಿ ಶ್ರೀಮಾತೆಯವರ ಆಶ್ರಯದಲ್ಲಿ ಸಂನ್ಯಾಸಿ ಜೀವನವನ್ನು ಆರಂಭಿಸಿದ ಅವರ ಜೀವನದ ಅನೇಕ ಘಟನೆಗಳು ಅಲ್ಲಿ ಅತ್ಯಂತ ಮನೋಹರವಾಗಿ ಮೂಡಿಬಂದಿವೆ. ಪ್ರಸ್ತುತ ಲೇಖನದಲ್ಲಿ ಅವರ ವ್ಯಕ್ತಿತ್ವದ ಒಂದೆರಡು ವಿಶಿಷ್ಟ ಅಂಶಗಳನ್ನು ಕಾಣಬಹುದಾಗಿದೆ. *(-ಸಂ)*



**ನಾ**ನು ವಿದ್ಯಾರ್ಥಿಯಾಗಿದ್ದಾಗ, ೧೯೫೩-೫೪ರಲ್ಲಿ ಬಹುಶಃ ಶ್ರೀಮಾತೆಯವರ ಜನ್ಮ ಶತಾಬ್ದಿಯ ಸಮಯ ಸ್ವಾಮಿ ಈಶಾನಾನಂದಜಿಯವರನ್ನು (ವರದ ಮಹಾರಾಜರು) ಕಂಡಿದ್ದೇನೆಂದು ತೋರುತ್ತದೆ. ನಾನಾಗ 'ಉದ್ಬೋಧನ'ದಲ್ಲಿ ಸ್ವಯಂ ಸೇವಕನಾಗಿದ್ದೆ. ಮೈಮೇಲೊಂದು ತೆಳುವಾದ ಕಾವಿ ಬಣ್ಣದ ಶಲ್ಯ, ಕೊರಳಿನಲ್ಲಿ ರುದ್ರಾಕ್ಷಿ ಮಾಲೆಯನ್ನು ಧರಿಸಿ ಚಿಕ್ಕ ಹುಡುಗ ನಂತೆ 'ಉದ್ಬೋಧನ' (ಮಾಯೇರ್ ಬಾಡಿ - ಅಮ್ಮನ ಮನೆ)ದಲ್ಲಿ ಓಡಾಡಿಕೊಂಡಿದ್ದ ಬಲು ಅದೃಷ್ಟವಂತ ಸಾಧುಗಳವರು. ಅತ್ಯಂತ ಸರಳ ಸ್ವಭಾವದ ಅವರು ತಮ್ಮ ಹನ್ನೊಂದನೆಯ ವರ್ಷದಲ್ಲಿ ಶ್ರೀಮಾತೆಯವರ ಬಳಿಗೆ ಬಂದು, ಅವರಿಂದ ದೀಕ್ಷೆಯನ್ನು ಪಡೆದು ನಂತರ ಶ್ರೀಮಾತೆಯವರ ದೇಹತ್ಯಾಗದ ಪರ್ಯಂತ ಅವರ ಸೇವೆಗೈದ ಪುಣ್ಯಾತ್ಮರು.

೧೯೬೧-೬೨ರಲ್ಲಿ ಅವರು ಎಂಟಲಿಯ ಅದ್ವೈತಾಶ್ರಮಕ್ಕೆ ಬಂದಿದ್ದರು. ಒಂದು ಭಾನುವಾರ ಸಾಯಂಕಾಲ ಅವರು ಶ್ರೀಮಾತೆಯವರ ಬಗ್ಗೆ ಭಾಷಣ ಮಾಡಿದ್ದರು. ನಾನಾಗ ಬ್ರಹ್ಮಚಾರಿಯಾಗಿ ಭಾಷಣದ ಧ್ವನಿವರ್ಧಕ ವ್ಯವಸ್ಥೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಹೊತ್ತಿದ್ದೆ. ಅಂದಿನ ದಿನಗಳಲ್ಲಿ ಭಾಷಣಗಳನ್ನು ರೆಕಾರ್ಡ್ ಮಾಡಿಕೊಳ್ಳುವ ಸೌಲಭ್ಯವಿರದೆ, ಧ್ವನಿವರ್ಧಕ ಮಾತ್ರವೇ ಇತ್ತು. ಮಹಾರಾಜರು ಕೆಲವೊಮ್ಮೆ ಕಣ್ಣು ಮುಚ್ಚಿ, ಕೆಲವೊಮ್ಮೆ ಕಣ್ತೆರೆದು ಬಾಂಕುರಾದ ಗ್ರಾಮ್ಯ ಶೈಲಿಯಲ್ಲಿ ನಿರರ್ಗಳವಾಗಿ ಮಾತನಾಡುತ್ತಿದ್ದರು. ಜನರು ಮುಗ್ಧರಾಗಿ ಪ್ರತ್ಯಕ್ಷದರ್ಶಿಗಳಾದ ಅವರ ವರ್ಣನೆಯನ್ನು ಕೇಳುತ್ತಿದ್ದರು. ಗ್ರಾಮ್ಯ ಬಂಗಾಳಿ ಭಾಷೆಯ ಕೆಲವು ಶಬ್ದಗಳನ್ನು ಉಚ್ಚರಿಸುತ್ತಿದ್ದರೆ ಶ್ರೀಮಾತೆಯವರೇ ಮಾತನಾಡುತ್ತಿರುವಂತೆ ಭಾಸವಾಗುತ್ತಿತ್ತು.

೧೯೬೮ರಲ್ಲಿ 'ಮಾತೃಸಾನ್ನಿಧ್ಯೇ' ಎಂಬ ಪುಸ್ತಕದ ಮುದ್ರಣದ ಸಮಯದಲ್ಲಿ ಅವರು ಅದ್ವೈತ ಆಶ್ರಮದಲ್ಲಿ ಕೆಲವು ದಿನಗಳನ್ನು ನಮ್ಮೊಡನೆ ಕಳೆದಿದ್ದರು. ಆಗ ನನಗೆ ಅವರ ನಿಕಟ ಸಾನ್ನಿಧ್ಯವನ್ನು ಅನುಭವಿಸುವ ಸುಸಂದರ್ಭ ಒದಗಿತ್ತು. ಶ್ರೀಮಾತೆಯವರ ಒಂದು ಫೋಟೋ ಆಲ್ಬಂ ಹಾಗೂ ಶ್ರೀಮಾತೆಯವರ ಪಾದಚಿಹ್ನೆ — ಇವೆರಡು ವಸ್ತುಗಳು ಅವರ ಹತ್ತಿರ ಸದಾ ಇರುತ್ತಿದ್ದವು.

ಶ್ರೀಮಾತೆಯವರ ಚರಣಚಿಹ್ನೆಯನ್ನು ಒಂದು ತೆಳುವಾದ ಬೋರ್ಡ್‌ಗೆ ಪಿನ್ ಮಾಡಲಾಗಿದ್ದು, ನವಿರಾದ ಕೆಂಪು ಬಟ್ಟೆಯಲ್ಲಿ ಅದನ್ನು ಸುತ್ತಿ ಇಡಲಾಗಿತ್ತು. ನಾನಾಗ ಆಶ್ರಮದ ಫೋಟೋ ವಿಭಾಗವನ್ನು ನೋಡಿಕೊಳ್ಳುತ್ತಿದ್ದೆ. ಮೊದಲು ಆ ಆಲ್ಬಂನ ಇತಿಹಾಸವನ್ನು ಹೇಳುತ್ತೇನೆ — ಇದರಲ್ಲಿ ಶ್ರೀಮಾತೆ

ಯವರ ಅಧಿಕಾಂಶ ಚಿತ್ರಗಳು, ಕೈಮುದ್ರೆ, ಪಾದಚಿಹ್ನೆಗಳ ಸಹಿತ ಒಟ್ಟು ೩೬ ಫೋಟೋಗಳಿವೆ. ಬ್ರಹ್ಮಚಾರಿ ಗಣೇನ್ ಶ್ರೀಮಾತೆಯವರ ಹೆಚ್ಚಿನ ಚಿತ್ರಗಳನ್ನು ತೆಗೆದಿದ್ದರಿಂದ ಬಹುಶಃ ಅವರೇ ಈ ಆಲ್ಬಂ ಅನ್ನು ತಯಾರಿಸಿರಬೇಕು. ಈ ಆಲ್ಬಂ ಈಗ ಬೇಲೂರು ಮಠದ ಲೈಬ್ರರಿಯಲ್ಲಿದೆ. ೧೯೮೮ರಲ್ಲಿ ಸ್ವಾಮಿ ಹಿರಣ್ಮಯಾನಂದಜಿಯವರು ಪ್ರಧಾನ ಕಾರ್ಯದರ್ಶಿಗಳಾಗಿದ್ದಾಗ ಅವರು ಅದನ್ನು ಅಮೆರಿಕಾಗೆ ತೆಗೆದುಕೊಂಡು ಹೋಗಿದ್ದರು. ಅದರಲ್ಲಿ ಬಹಳ ಇತಿಹಾಸ ಅಡಗಿರುವುದರಿಂದ ೧೨.೬.೧೯೮೮ರಂದು ನಾನದನ್ನು ಸೇಂಟ್ ಲೂಯಿಸ್ (ಅಮೆರಿಕದ ಒಂದು ಆಶ್ರಮದ ಹೆಸರು)ನಲ್ಲಿ ಕ್ಸೆರಾಕ್ಸ್ ಮಾಡಿಟ್ಟೆ.

೧೯೬೮ರಲ್ಲಿ ವರದ ಮಹಾರಾಜರು ನಿವೇದಿತಾ ಬಳಿಯಿದ್ದ, ಇಂದು ಎಲ್ಲೆಡೆ ಪೂಜಿಸಲ್ಪಡುತ್ತಿರುವ, ದೇವಾಲಯದಲ್ಲಿರುವ ಶ್ರೀಮಾತೆಯವರ ಮೂಲ ಪ್ರತಿಯನ್ನು ನನಗೆ ತೋರಿಸಿದರು. ಅದನ್ನು ಅದ್ವೈತ ಆಶ್ರಮಕ್ಕೆ ಕೊಡಲು ಅವರಿಗೆ ನಾನು ಹೇಳಿದೆ. ಮೊದಲು ಅವರು ಅದಕ್ಕೊಪ್ಪಲಿಲ್ಲ. ಕೊನೆಗೆಂದರು, ''ನಿಮ್ಮ ಪ್ರೆಸಿಡೆಂಟ್ ಗ್ಯಾರಂಟಿ ಕೊಟ್ಟರೆ ಅದನ್ನು ಅವರಿಗೊಪ್ಪಿಸುವೆ.'' ಆಗ ಬುಧಾನಂದಜಿಯವರು ಅದ್ವೈತ ಆಶ್ರಮದ ಪ್ರೆಸಿಡೆಂಟ್ ಆಗಿದ್ದರು. ಅವರಿಗೆ ನಾನು ಆ ಫೋಟೋದ ಬಗ್ಗೆ ಎಲ್ಲಾ ಮಾಹಿತಿಗಳನ್ನು ನೀಡಿದಾಗ ಅವರು ಮಹಾರಾಜರಿಗೆ ತಾವು ಈ ಮೂಲ ಚಿತ್ರವನ್ನು ಜಾಗ್ರತೆಯಾಗಿ ರಕ್ಷಣೆ ಮಾಡುವುದಾಗಿ ಮಾತು ಕೊಟ್ಟರು. ಈ ಮೂಲ ಪ್ರತಿಯಿಂದ ನಾನು ಅನೇಕ ನೆಗೆಟಿವ್‌ಗಳನ್ನು ಮಾಡಿಟ್ಟುಕೊಂಡು ನಂತರ ಈ ದೇಶಕ್ಕೆ ತಂದಿಟ್ಟುಕೊಂಡಿರುವೆ. ನಾವೀಗ ಮಾರಾಟ ಮಾಡುವುದು ಈ ಮೂಲ ಚಿತ್ರದ ಫೋಟೋ ಕಾಪಿಯನ್ನು.

ನಾನು ಭಾರತದಲ್ಲಿದ್ದಾಗ ಇನ್ನೊಂದು ಕೆಲಸವನ್ನು ಮಾಡಿದೆ. ೧೯೬೯-೭೦ರಲ್ಲಿ ಶ್ರೀಮಾತೆಯವರ ಶಿಷ್ಯರುಗಳು ಒಬ್ಬೊಬ್ಬರಾಗಿ ಹೊರಟುಹೋಗುತ್ತಿರುವುದನ್ನು ಗಮನಿಸಿದೆ. ಇವರೆಲ್ಲ ಹೋಗಿ ಬಿಟ್ಟರೆ ಅನೇಕ ಪ್ರತ್ಯಕ್ಷದರ್ಶಿಗಳ ಇತಿಹಾಸವು ಕಳೆದು ಹೋಗಿಬಿಡುತ್ತವೆ. ಶ್ರೀಮಾತೆಯವರ ಹಲವು ಶಿಷ್ಯರು — ವರದ ಮಹಾರಾಜರು, ವೈಕುಂಠ ಮಹಾರಾಜರು, ಧರಣಿ ಮಹಾರಾಜರು, ಅಪೂರ್ವಾನಂದಜಿ ಮುಂತಾದವರು ಆಗ ಕಾಶಿಯಲ್ಲಿದ್ದರು. ನಾನು ಅದ್ವೈತ ಆಶ್ರಮದಿಂದ ಶ್ರೀಮಾತೆಯವರ ೩೫ ಚಿಕ್ಕ ಫೋಟೋಗಳನ್ನು ವರದ ಮಹಾರಾಜರಿಗೆ ಕಳುಹಿಸಿದೆ. ಅವರು ಈ ಭಾವಚಿತ್ರಗಳ ಹಿಂದೆ ಸಂಖ್ಯೆಗಳನ್ನು ನಮೂದಿಸಿ ಚಿಕ್ಕ ಕಾಗದದಲ್ಲಿ ಈ ಸಂಖ್ಯೆಗಳನ್ನು ಬರೆದು, ಪ್ರತಿಯೊಂದು ಚಿತ್ರದ ಇತಿಹಾಸ — ಫೋಟೋ ತೆಗೆದ ಸ್ಥಳ, ದಿನ ಹಾಗೂ ಗ್ರೂಪ್ ಫೋಟೋ ಆಗಿದ್ದರೆ, ವ್ಯಕ್ತಿ ಪರಿಚಯ ಇವನ್ನೆಲ್ಲ ಬರೆದು ನನಗೆ ಕಳುಹಿಸಿದರು. ಈ ಚಿತ್ರಗಳು ಹಾಗು ವರದ ಮಹಾರಾಜರ ನೋಟ್ಸ್‌ಗಳನ್ನವಲಂಬಿಸಿ ನಾವು ಒಂದು ಆಲ್ಬಂ ತಯಾರಿಸಿದೆವು. ಇದು ರಾಮಕೃಷ್ಣ ಮಿಶನ್ನಿನ ಸಂಪತ್ತೇ ಸರಿ. ವರದ ಮಹಾರಾಜರು ತಾವೇ ಬರೆದ ನೋಟ್ಸ್ ಹಾಗೂ ಚಿತ್ರಗಳು ಇಂದಿಗೂ ನನ್ನ ಬಳಿ ಇವೆ.

ಇನ್ನು ಶ್ರೀಮಾತೆಯವರ ಪಾದಚಿಹ್ನೆಗಳ ಬಗ್ಗೆ ಹೇಳುತ್ತೇನೆ. ೧೯೧೯ರಲ್ಲಿ ಕೋಯಲ್‌ಪಾರದಲ್ಲಿದ್ದಾಗ ಶ್ರೀಮಾತೆಯವರು ವರದ ಮಹಾರಾಜರಿಗೆ ಹೇಳಿ, ಕೋತೂಲಪುರದಿಂದ ವಸ್ತ್ರ ಹಾಗೂ ರಂಗು (ಆಲ್ತಾ) ತರಿಸಿ ೩೨ ಪಾದಚಿಹ್ನೆಗಳನ್ನು ನೀಡಿದರು. ಅವರ ಜೀವಿತಕಾಲದಲ್ಲಿ ತೆಗೆದ ಕೊನೆಯ ಪಾದಚಿಹ್ನೆಗಳೆಂದರೆ ಇವೇ. ಶ್ರೀಮಾತೆಯವರು ತಾವೇ ವರದ ಮಹಾರಾಜರಿಗೆ ಕೊಟ್ಟಿದ್ದ ಒಂದನ್ನು ತೆಳು ಬೋರ್ಡ್‌ಗೆ ಅಂಟಿಸಿ, ಕೆಂಪು ವಸ್ತ್ರವನ್ನು ಹೊದಿಸಿ ಅವರು ತಾವು ಹೋದಲ್ಲಿಗೆಲ್ಲ ತೆಗೆದುಕೊಂಡು ಹೋಗುತ್ತಿದ್ದರು. ೧೯೭೪ರಲ್ಲಿ ವರದ ಮಹಾರಾಜರು ಅದ್ವೈತ ಆಶ್ರಮದಲ್ಲಿ ದೈವಾಧೀನರಾದರು. ೧೯೮೬ರಲ್ಲಿ ನಾನು ಭಾರತಕ್ಕೆ ಹೋದಾಗ ರಜನೀ ಮಹಾರಾಜರ ಬಳಿ ಶ್ರೀಮಾತೆಯವರ ಈ ಪಾದಚಿಹ್ನೆಯಿರುವುದನ್ನು ನೋಡಿದೆ. ನಾನವರನ್ನು ಅನುನಯ, ವಿನಯದಿಂದ ಪ್ರಾರ್ಥಿಸಿಕೊಂಡಾಗ ಅವರು ನನಗೆ ಅದನ್ನು ಕೊಟ್ಟರು. ಜೀರ್ಣಾವಸ್ಥೆಯಲ್ಲಿದ್ದ ಈ ಚರಣ ಚಿಹ್ನೆಯ ಹಿಂದೆ acid free ವಸ್ತ್ರವನ್ನು ಹಚ್ಚಿ ಇದನ್ನು ಸೇಂಟ್ ಲೂಯಿಸ್‌ನ ಶ್ರೀರಾಮಕೃಷ್ಣರ ಮಂದಿರದ ಗರ್ಭಗೃಹದಲ್ಲಿ, ಅವರ ವೇದಿಕೆಯ ಕೆಳಗೆ ಸಂರಕ್ಷಿಸಿದ್ದೇನೆ.

ವರದ ಮಹಾರಾಜರ ವಿಷಯಕ್ಕೆ ಮರಳೋಣ. ೧೯೬೮ರಲ್ಲಿ 'ಮಾತೃಸಾನ್ನಿಧ್ಯೇ' ಪುಸ್ತಕದ ಮುದ್ರಣ ಸಮಯದಲ್ಲಿ ಶ್ರೀಮಾತೆಯವರ ಭಾವಚಿತ್ರಕ್ಕಾಗಿ ಅದ್ವೈತ ಆಶ್ರಮಕ್ಕೆ ಬಂದು, ಅವರು ಮೂರು ಚಿತ್ರಗಳನ್ನು ಆರಿಸಿದರು. ಮೊದಲನೆಯ ಚಿತ್ರ — ಉದ್ಬೋಧನದಲ್ಲಿ ಧ್ಯಾನಮಗ್ನನಾಗಿರುವ ಶ್ರೀಮಾತೆಯವರ ಬಗ್ಗೆ ವರದ ಮಹಾರಾಜರು ತಮ್ಮ ಟ್ರೈಪಾಡ್ (ಫೋಟೋ ತೆಗೆಯಲು ಬಳಸುವ ಮೂರು ಕಾಲುಗಳ ಒಂದು ಸ್ಟ್ಯಾಂಡ್) ಸಜ್ಜುಗೊಳಿಸಿ ಕ್ಯಾಮೆರಾದಿಂದ ಈ ಭಾವಚಿತ್ರವನ್ನು ತೆಗೆದರು. ಟ್ರೈಪಾಡ್ ಸದ್ದಿಗೆ ಶ್ರೀಮಾತೆಯವರು ಕಣ್ತೆರೆದಾಗ ಗಣೇನ್ ಮಹಾರಾಜರು ಹೇಳಿದರು, ''ಅಮ್ಮ, ನಿಮ್ಮ ಒಂದು ಫೋಟೋ ತೆಗೆಯುತ್ತಿದ್ದೇನೆ.'' ಮತ್ತೆ ಇದೇ ಸಮಯ ಕಣ್ಣು ತೆರೆದಿರುವ ಮತ್ತೊಂದು ಚಿತ್ರವನ್ನು ತೆಗೆದರು.

ಎರಡನೆಯ ಭಾವಚಿತ್ರ : ಈ ಚಿತ್ರವನ್ನು ವರದ ಮಹಾರಾಜರು 'ತಾಯಿ ಅನ್ನಪೂರ್ಣೆ' ಎಂದು ವರ್ಣಿಸಿದ್ದರು. ಈವರೆಗೆ ಜನರು, ಇದನ್ನು ಶ್ರೀಮಾತೆಯವರ ಹಳೆಯ ಮನೆಯಲ್ಲಿ ತೆಗೆದ ಚಿತ್ರವೆಂದು ಅಭಿಪ್ರಾಯಪಟ್ಟಿದ್ದರು. ೧೯೮೬ರಲ್ಲಿ ಜಯರಾಮ್‌ಬಾಟಿಯ ಪ್ರಭಾತ ಮಹಾರಾಜರು, ಇದು ಸತೀಶ ಬಿಸ್ವಾಸರ ಮನೆಯಲ್ಲಿ ತೆಗೆದ ಚಿತ್ರವೆಂದು ನನಗೆ ಹೇಳಿದರು. ''ರಾಮಮಯ ಮಹಾರಾಜರು, ತಮಗೆ ಹಾಗೂ ಅಬ್ಜಜಾನಂದಜಿಯವರಿಗೆ ತಾವು ಆಗ ಅಲ್ಲಿ ಉಪಸ್ಥಿತರಿದ್ದರೆಂದು ಹೇಳಿದರು.'' ಅದೇನೇ ಇರಲಿ, ಸ್ವಾಮಿ ಶಾರದೇಶಾನಂದಜಿಯವರ

ಸ್ಮೃತಿಕಥೆಯಲ್ಲಿ, ''ಶ್ರೀಮಾತೆಯವರು ಬಾಂಕುವನ್ನು ನೋಡಲೆಂದು ಹೋಗಿದ್ದಾಗ ಸತೀಶ ಬಿಶ್ವಾಸರ ಪತ್ನಿ ಶ್ರೀಮಾತೆಯವರು ಕುಳಿತುಕೊಳ್ಳಲೆಂದು ಮಣ್ಣಿನ ವರಾಂಡದಲ್ಲಿ ಒಂದು ಜಮಖಾನ ಹಾಸಿದರು.'' ಅವರು ಹೇಳುತ್ತಾರೆ, ''ಪೂರ್ವ ದಿಕ್ಕಿಗೆ ತಿರುಗಿ ... ವರಾಂಡಾದ ಬದಿಯಲ್ಲಿ ಕಾಲುಗಳನ್ನು ಕೆಳಗೆ ಬಿಟ್ಟುಕೊಂಡು ಕುಳಿತಿದ್ದಾರೆ. ತಮ್ಮ ಎರಡು ಕೈಗಳನ್ನೂ ಮಡಿಲ ಮೇಲಿರಿಸಿಕೊಂಡು, ಕಿರಿದಾದ ಕೆಂಪಂಚಿನ ಬಿಳಿಯ ಸೀರೆಯನ್ನುಟ್ಟು ಸೆರಗನ್ನು ತಲೆಯಮೇಲೆ ಸ್ವಲ್ಪ ಎಳೆದುಕೊಂಡು ಪ್ರಸನ್ನವದನರಾಗಿ, ಸ್ವಲ್ಪ ಗುಂಗುರಾದ ಕೇಶರಾಶಿಯನ್ನು ಬಲಗಡೆ ಇಳಿ ಬಿಟ್ಟು ಭಾಗ್ಯವಂತ ಗೃಹಸ್ಥರ ಮನೆಯ ಬಾಗಿಲಲ್ಲಿ ಕುಳಿತ ಲಕ್ಷ್ಮೀದೇವಿಯಂತಿದ್ದರು. ಹತ್ತಿರದಲ್ಲಿ ಧಾನ್ಯಭರಿತ ಗೋಣಿಯು ಶ್ರೀಲಕ್ಷ್ಮಿಯ ಶುಭಾಗಮನದ ಸೂಚನೆಯನ್ನು ನೀಡುತ್ತಿದ್ದಂತೆ ತೋರುತ್ತಿತ್ತು.'' *(ಶ್ರೀ ಶ್ರೀ ಮಾಯೇರ್ ಸ್ಮೃತಿಕಥಾ, ಪುಟ ೧೦೫)* ತೃತೀಯ ಭಾವಚಿತ್ರದ ಬಗ್ಗೆ ವರದ ಮಹಾರಾಜರು ಹೀಗೆ ಹೇಳುತ್ತಾರೆ: ''ಗಣೇನ್ ಮಹಾರಾಜರು ಶ್ರೀಮಾತೆಯವರು ಕುಳಿತಿರುವ ಒಂದು ಚಿತ್ರವನ್ನು ತೆಗೆದರು. ಅದರಲ್ಲಿ ಅವರ ಬಲಗಾಲು ಸ್ವಲ್ಪ ಉದ್ದವಾಗಿಯೂ, ಎಡಗಾಲು ಸ್ವಲ್ಪ ಗಿಡ್ಡವಾಗಿಯೂ ಕಾಣಿಸುತ್ತದೆ. ಈ ಚಿತ್ರವನ್ನು ಕಂಡ ಶರತ್ ಮಹಾರಾಜರು ಗಣೇನನಿಗೆ, 'ನೀನು ಇದೆಂಥ ಚಿತ್ರವನ್ನು ತೆಗೆದಿರುವೆ? ನನಗಾಗಿ ನೀನು ಶ್ರೀಮಾತೆಯವರ ಮುಖದ ಚಿತ್ರವನ್ನು ತೆಗೆದುಕೊಡು,' ಎಂದರು. ಇದೇ ಆ ಚಿತ್ರ.'' ಈ ಚಿತ್ರದ ಬಗ್ಗೆ ವರದ ಮಹಾರಾಜರು ಹೀಗೆ ಹೇಳುತ್ತಾರೆ; ''ನೋಡು, ಶ್ರೀಮಾತೆಯವರು ಕೌಶಾಂಬೀ.'' ಕೌಶಾಂಬೀ ದೇವಿಯನ್ನು ವರ್ಣಿಸುತ್ತ ಅವರೆಂದರು, ''ಆಜನ್ಮ ಪಾವಿತ್ರ್ಯವುಳ್ಳ ವಿವಾಹಿತ (ಮುತ್ತೈದೆ) ಸ್ತ್ರೀಯನ್ನು ಶಾಸ್ತ್ರಗಳಲ್ಲಿ 'ಕೌಶಾಂಬಿ' ಎನ್ನುತ್ತಾರೆ. 'ದುರ್ಗಾಸಪ್ತಶತೀ' ಯಲ್ಲಿ ಕೌಶಾಂಬಿಯ ಉಲ್ಲೇಖವಿದೆ.''

ನಾನು ಅದ್ವೈತ ಆಶ್ರಮದಲ್ಲಿದ್ದಾಗ ಒಂದು ದಿನ ವರದ ಮಹಾರಾಜರನ್ನು ಕೇಳಿದ್ದೆ, ''ಮಹಾರಾಜ್, ನೀವು ಸುಮಾರು ಹನ್ನೊಂದು ವರ್ಷ ಶ್ರೀಮಾತೆಯವರೊಂದಿಗಿದ್ದಿರಿ. ಈಗ ಹೇಳಿ, ನಮ್ಮ ಮನೆಗಳಲ್ಲೂ ಅಮ್ಮ, ಅಕ್ಕ-ತಂಗಿಯರು, ಚಿಕ್ಕಮ್ಮ, ಸೋದರತ್ತೆ ಮುಂತಾದ ಹೆಂಗಸರಿದ್ದಾರೆ. ಇವರಿಗೂ ಶ್ರೀಮಾತೆಯವರಿಗೂ ಇರುವ ವ್ಯತ್ಯಾಸವೇನು?'' ಕೆಲಕ್ಷಣಗಳು ಮೌನವಾಗಿದ್ದು ಬಳಿಕ ಹೇಳಿದರು, ''ವಾಸನಾಶೂನ್ಯರಾದ ಯಾವುದೇ ವ್ಯಕ್ತಿಯನ್ನು ನೀನು ನೋಡಿದ್ದೀಯಾ? ಶ್ರೀಮಾತೆಯವರು ಸಂಪೂರ್ಣವಾಗಿ ವಾಸನಾಶೂನ್ಯರಾಗಿದ್ದರು. ನೋಡು, ಮನುಷ್ಯನೆಂದ ಮೇಲೆ ಒಂದಲ್ಲ ಒಂದು ಆಸೆ ಇದ್ದೇ ಇರುತ್ತದೆ. ಆಸೆಗಳಿಂದ ಮುಕ್ತನಾಗಿರುವವನೆಂದರೆ ಕೇವಲ ಭಗವಂತನೊಬ್ಬನೆ. ಶ್ರೀಮಾತೆಯವರು ದೇವಿ ಭಗವತಿ.''

ಇತರ ನಾರಿಯರ ಹಾಗೂ ಶ್ರೀಮಾತೆಯವರ ನಡುವಣ ವ್ಯತ್ಯಾಸದ ಬಗ್ಗೆ ಸ್ವಾಮಿ ವಿಶುದ್ಧಾನಂದಜಿಯವರ ಮಾತುಗಳು ನೆನಪಿಗೆ ಬರುತ್ತವೆ. ಅವರನ್ನು ಅನೇಕ ಸಲ ನೋಡಿದ್ದೇನೆ, ಅವರಿಗೆ ನಮಸ್ಕರಿಸಿದ್ದೇನೆ, ಆದರೆ ಅವರೊಂದಿಗೆ ಮಾತನಾಡುವ ಅವಕಾಶ ಸಿಗಲಿಲ್ಲ. ಅವರು ಹೇಳುತ್ತಿದ್ದರು, ''ಶ್ರೀಮಾತೆಯವರಿಗೆ ನಾನೊಂದು ಹೆಸರನ್ನು ಕೊಟ್ಟಿದ್ದೇನೆ - 'ಮೇರೆ ಮೀರಿದ ತಾಯಿ' ಯಾವುದೇ ತಾಯಿಯು ನಿರ್ದಿಷ್ಟ ಸೀಮೆಯಲ್ಲಿರುವುದನ್ನು ಕಾಣುತ್ತೇವೆ. ಆಕೆಯ ಪ್ರೀತಿ ಕೇವಲ ತನ್ನ ಮಗುವಿಗೆ ಮಾತ್ರ ಸೀಮಿತವಾಗಿರುತ್ತದೆ. ಆದರೆ ಈ ತಾಯಿಯಾದರೋ — ಈ ಜಗತ್ತಿಗೆಲ್ಲ ತಾಯಿ — ಜಗನ್ಮಾತೆ.''

ವರದ ಮಹಾರಾಜರು ಒಂದು ಹಾಸ್ಯ ಕಥೆಯನ್ನು ಹೇಳಿದ್ದರು: ೧೯೫೦ರ ಕೊನೆಯಲ್ಲಿ ಸ್ವಾಮಿ ದೇವಾನಂದಜಿಯವರು ಬಲರಾಮ ಮಂದಿರವನ್ನು ನೋಡಿಕೊಳ್ಳುತ್ತಿದ್ದರು. ಪ್ರತಿ ಶನಿವಾರದಂದು ಪ್ರವಚನ ಕಾರ್ಯಕ್ರಮವನ್ನು ಏರ್ಪಡಿಸಲಾಗುತ್ತಿತ್ತು. ವಿಖ್ಯಾತ ಸಾಹಿತಿಯಾಗಿದ್ದ ಅಚಿಂತ್ಯಕುಮಾರ ಸೇನ್‌ಗುಪ್ತ ಅವರು ಪ್ರತಿ ಶನಿವಾರದಂದು ಧಾರಾವಾಹಿಕವಾಗಿ ಶ್ರೀ ಶಾರದಾಮಣಿಯವರ ಬಗ್ಗೆ ಭಾಷಣ ನೀಡುತ್ತಿದ್ದರು. ಅಚಿಂತ್ಯಬಾಬು ಬರೆದ 'ಪರಮಾ ಪ್ರಕೃತಿ ಶ್ರೀ ಶ್ರೀಶಾರದಾಮಣಿ' ಎಂಬ ಪುಸ್ತಕದಲ್ಲಿ ಬರೆಯುತ್ತಾರೆ ''ವರದ ಎಂಬ ಚಿಕ್ಕವಯಸ್ಸಿನ ವಿಧವೆಯೊಬ್ಬಳು ಶ್ರೀಮಾತೆಯವರೊಂದಿಗೆ ಜಯರಾಂಬಾಟಿಗೆ ಹೋಗಿದ್ದಳು.'' ನಂತರ ಒಂದು ದಿನ ಅಚಿಂತ್ಯ ಬಾಬುವಿನ ಭಾಷಣದ ಬಳಿಕ ವರದ ಮಹಾರಾಜರು ತಮ್ಮ ಉತ್ತರೀಯದಿಂದ ತಲೆಯನ್ನು ಮರೆಸಿ, ಮುಖವನ್ನು ಮುಚ್ಚಿಕೊಂಡು ಅಚಿಂತ್ಯ ಬಾಬುವಿಗೆ ಹೇಳಿದರು: ''ಅಚಿಂತ್ಯಬಾಬು, ನಾನೇ ಆ ಚಿಕ್ಕ ವಯಸ್ಸಿನ ವಿಧವೆ, ವರದ!'' ಈ ಅನಿರೀಕ್ಷಿತ ಮಾತುಗಳಿಂದ ತಬ್ಬಿಬ್ಬಾದ ಅಚಿಂತ್ಯಬಾಬು ಕ್ಷಮೆ ಯಾಚಿಸಿದರು. ವರದ ಮಹಾರಾಜರು ಶ್ರೀಮಾತೆಯವರಿಂದ ಪಡೆದ ಪ್ರೀತಿ-ವಾತ್ಸಲ್ಯಗಳನ್ನು ಮಾತಿನಲ್ಲಿ ವರ್ಣಿಸಲು ಅಸಾಧ್ಯ. ಅದನ್ನು ಅಳೆಯುವ ಸಾಮರ್ಥ್ಯ ನಮಗಿಲ್ಲ. ಪ್ರೀತಿ ಎಂಬುದು ಹೃದಯಕ್ಕೆ ಸಂಬಂಧಿಸಿದ್ದು, ಅದನ್ನು ತಮ್ಮ ಹೃದಯದ ಕಂದರದಲ್ಲಿ ಅನುಭವಿಸಿದ್ದಾರೆ. ಇವರೆದುರು ತಂದೆ-ತಾಯಿಯರ ಪ್ರೀತಿಯೂ ಮ್ಲಾನವಾಗುತ್ತದೆ.

**ಭೂರ್ಧಾರಯತಿ ಸತ್ಯೇನ**
**ಸತ್ಯೇನೋದಯತೇ ರವಿಃ ।**
**ಸತ್ಯೇನ ವಾಯುಃ ಪವತೇ**
**ಸತ್ಯೇನಾಪಃ ಸ್ರವಂತಿ ಚ ॥**

ಸತ್ಯದಿಂದ ಭೂಮಿಯು ನಿಂತಿದೆ. ಸತ್ಯದಿಂದಲೇ ಸೂರ್ಯನು ಹುಟ್ಟುತ್ತಾನೆ. ಸತ್ಯದಿಂದಲೇ ಗಾಳಿಯು ಬೀಸುತ್ತದೆ. ಸತ್ಯದಿಂದಲೇ ನೀರು ಹರಿಯುತ್ತದೆ.

— ನಾರದ ಸ್ಮೃತಿ